ಶ್ರೀ ಸಿ. ಎಂ. ಪೂಣಚ್ಚ.—ಅಲ್ಲಿಂದ ಮಣ್ಣನ್ನು ಇಲ್ಲಿಗೆ ತರುತ್ತಿದ್ದಾರೆ. ಬೇಕಾದರೆ, ಅಲ್ಲಿ process ಮಾಡುವಂಥ ವಿಷಯವನ್ನು ಆಲೋಚನೆ ಮಾಡ ಬಹುದು. ಆ ವಿಷಯ ಈಚೆಗೆ ಸರ್ಕಾರದ ದೃಷ್ಟಿ ಯಲ್ಲಿದೆ. ಆ ಕಾರ್ಯ ನಡೆಯುವುದಕ್ಕೆ ವ್ಯವಸ್ಥೆ ಮಾಡಲು ಅನುಕೂಲವಾದಂಥ ರೀತಿಯಲ್ಲಿ ಆಲೋಚನೆ ಮಾಡಬೇಕಾಗುತ್ತದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಪ್ಯೂವೇಟ್ ಸೆಕ್ಟಾರ್‌ನಿಂದ ಮುಂದೆ ಬಂದರೆ ಲೈಸೆನ್ಸ್ ಕೊಡು ತ್ತೀರಾ?

ಶ್ರೀ ಸಿ. ಎಂ. ಪೂಣಚ್ಚ.—ದೊಡ್ಡ ಪ್ರಮಾಣದ ಕಾರ್ಖಾನೆಯಾದರೆ ಇಂಡಿಯಾ ಸರ್ಕಾರದವರಿಗೆ ಲೈಸೆನ್ಸಿಗೋಸ್ಕರ ಬರೆಯಬೇಕು. ಅಂಥ ಖಾಸಗಿ ಜನರು ಮುಂದೆ ಬಂದರೆ ಅವರ ವಿಷಯದಲ್ಲಿ ಸಿಫಾರಸ್ಸುಗಳನ್ನು ಮಾಡಲು ಆಲೋಚಿಸುತ್ತೇವೆ. ಚಿಕ್ಕ ಪ್ರಮಾಣದಲ್ಲಿ, ಗುಡಿ ಕೈಗಾರಿಕೆಗಳ ರೀತಿಯಲ್ಲಿ ಮಾಡುವುದಾಗಿದ್ದರೆ ಅದಕ್ಕೆ ಸಾಕಷ್ಟು ಉತ್ತೇಜನ ವನ್ನು ಕೊಡುವುದಕ್ಕೆ ಸಿದ್ಧರಾಗಿದ್ದೇವೆ.

Bhoobada System in Gajendragada, Dharwar District.

Q.—1526. Sri A. J. DODDAMETI (Ron).—

Will the Government be pleased to state:—

(*a*) whether, even after the abolition of saranjam, the Bhoobhada (ground rent) system is still in existence in Gajendragada, Dharwar district;

(*b*) whether they have taken measures to recover all the outstanding Bhoobhada arrears;

(*c*) whether they have received any appeal from the residents of Gajendragada to stop the recovery of those arrears;

(*d*) if so, the action taken by them in that behalf?

A.—Sri M. P. PATIL (Minister for Revenue).—

(*a*) Ground rent which was being levied by the erstwhile saranjamdars on non-agricultural plots has been brought to the level of non-agricultural assessment recently.

(*b*) Steps to recover the arrears will be taken by the authorities concerned in accordance with the orders issued by Government.

(*c*) Yes. Representations were received to stop recovery of ground rent and to recover only non-agricultural assessment in lieu of ground rent.

(*d*) The request of the petitioners has been complied with.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಪ್ರಶ್ನೆಯಲ್ಲಿ ಅಚ್ಚಿನ ಒಂದು ದೋಷವಾಗಿದೆ. ನಾನು ಗಜೇಂದ್ರ ಗಡವಲ್ಲ ಎಂದು ಕೇಳಿರಲಿಲ್ಲ. ಗಜೇಂದ್ರಗಡದ ಹಳ್ಳಿ ಗಳಲ್ಲಿ ಎಂದು ಕೇಳಿದ್ದೆ. ಗಜೇಂದ್ರಗಡ ಒಂದಕ್ಕೆ ಮಾತ್ರ ಉತ್ತರ ಕೊಟ್ಟಿದ್ದಾರೆ. ಆದರೆ ಅದಕ್ಕೆ ಸೇರಿದೆ. 27 ಹಳ್ಳಿಗಳಿವೆ. ಆದುದರಿಂದ ನಾನು ಉಪಪ್ರಶ್ನೆ ಗಳನ್ನು ಹಾಕಲು ತೊಂದರೆ ಬರುತ್ತದೆ.

ಅಧ್ಯಕ್ಷರು.—ಮತ್ತೊಂದು ಹೊಸ ಪ್ರಶ್ನೆ ಹಾಕಿ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಪ್ರಶ್ನೆಗೆ ಉತ್ತರ ದೊರೆಯುವುದಕ್ಕೆ ಹನ್ನೆರಡು ತಿಂಗಳಾಗಿವೆ. ಮಾನ್ಯ ಮಂತ್ರಿಗಳ ಬಳಿ ವಿವರಗಳಿದ್ದರೆ ಉತ್ತರವನ್ನು ಹೇಳ ಬಹುದಲ್ಲವೆ?

Sri M. P. PATIL.—If the Hon'ble Member wants to ask the question, I have no objection.

ಅಧ್ಯಕ್ಷರು.—ಈಗ ಬೇಡ. ತಾವು ಬೇರೆ ಪ್ರಶ್ನೆ ಕೊಡಿ. ನಾಲ್ಕೈದು ದಿವಸಗಳಲ್ಲಿ ಉತ್ತರ ದೊರೆಯು ವಂತೆ ಮಾಡುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮಾನ್ಯ ಮಂತ್ರಿಗಳು ಉತ್ತರ ಕೊಡಲು ತಯಾರಾಗಿದ್ದಾರೆ. ನಾನೂ ಪ್ರಶ್ನೆಕೇಳಲು ತಯಾರಾಗಿದ್ದೇನೆ. ತಾವು ಹೇಳು ವುದು ಬಹಳ ಆಶ್ಚರ್ಯವಾಗಿದೆ.

ಅಧ್ಯಕ್ಷರು.—ಈ ಪ್ರಶ್ನೆಯೊಳಗೆ ಗಜೇಂದ್ರಗಡ ಊರಿನ ವಿಷಯ ಮಾತ್ರ ಅಡಕವಾಗಿದೆ. ಇತರ ಹಳ್ಳಿಗಳ ವಿಷಯವನ್ನು ಕೇಳಲು ಈ ಪ್ರಶ್ನೆಯಲ್ಲಿ ಅವಕಾಶವಿಲ್ಲ. ಮಾನ್ಯ ಮಂತ್ರಿಗಳೂ ಮಾನ್ಯ ಸದಸ್ಯರೂ ಪ್ರಶ್ನೋತ್ತರಗಳಿಗೆ ತಯಾರಾಗಿದ್ದರೂ, ನಥೆಯ ನಡ ವಳಿಕೆಯ ನಿಯಮಾವಳಿಗಳ ಪ್ರಕಾರ ನಾನು ಅವಕಾಶ ಕೊಡುವಂತಿಲ್ಲ. ಆ ಕಾರಣ ತಾವು ಬೇರೊಂದು ಪ್ರಶ್ನೆಯನ್ನು ಹಾಕಿದರೆ ಮೂರು ನಾಲ್ಕು ದಿನಗಳಲ್ಲಿಯೇ ಉತ್ತರವನ್ನು ತರಿಸಿಕೊಡೋಣ.

ಶ್ರೀ ಬಿ. ಕೆ. ಪುಟ್ಟಸ್ವಾಮಯ್ಯ.—ಪ್ರಶ್ನೆ ಕೊಟ್ಟ ಮೂರು ನಾಲ್ಕು ದಿನಗಳಲ್ಲೇ ಉತ್ತರಗಳನ್ನು ತರಿಸಿ ಕೊಡುತ್ತೀರಾ, ಸ್ವಾಮಿ?

ಅಧ್ಯಕ್ಷರು.—ಮಂತ್ರಿಗಳು ಈಗಲೇ ಉತ್ತರ ಕೊಡಲು ಸಿದ್ಧರಾಗಿದ್ದಾರೆ. ಅದಕ್ಕೆ ಹಾಗೆ ಹೇಳಿದೆ.

Cases under the Prevention of Corruption Act, 1947, in Bijapur District.

Q.—1533. Sri P. G. SIDHANTI (Muddebihal).—

Will the Government be pleased to state:—

(*a*) the number of cases investigated under the Prevention of Corruption Act, 1947, together with their results in Bijapur district since 1955;

(*b*) whether there are any cases in which trial has not commenced for more than a year after the charge sheets were sent;

(*c*) if so, the reasons for the delay?